## ಪತ್ರಿಕಾ ಪ್ರಕಟಣೆ

### ಗದಗ ರೇಲ್ವೆ ಪೊಲೀಸ್ ಠಾಣೆ ಮೊ.ಸಂ.05/2022 ಕಲಂ 379 ಐ.ಪಿ.ಸಿ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿತನನ್ನು ಬಂಧಿಸಿ ಒಟ್ಟು 18 ಬೈಕ್‌ಗಳನ್ನು ಪತ್ತೆ ಮಾಡಿರುವ ಬಗ್ಗೆ

ದಿನಾಂಕ:10.02.2022 ರಂದು ಹೊಳೆಆಲೂರ ರೈಲು ನಿಲ್ದಾಣದಲ್ಲಿ ಪಿರ್ಯಾದುದಾರರು ರಾತ್ರಿ ಪಾಳಿಯ ರೈಲ್ವೇ ಪಾಯಿಂಟ್ಸ ಮ್ಯಾನ್ ಕರ್ತವ್ಯಕ್ಕೆ ಹೋಗುವ ಸಲುವಾಗಿ ಹೊಳೆಆಲೂರ ರೈಲು ನಿಲ್ದಾಣದ ಮುಂದೆ ನಿಲ್ಲಿಸಿ ಹೋಗಿದ್ದ ತಮ್ಮ ಹಿರೋ ಸ್ಪ್ಲೇಂಡರ್ ಪ್ಲಸ್ ಬೈಕ್‌ನ್ನು ಯಾರೋ ಅಪರಿಚಿತರು ಕಳುವು ಮಾಡಿರುತ್ತಾರೆಂದು ನೀಡಿದ ದೂರಿನ ಮೇರೆಗೆ ಗದಗ ರೇಲ್ವೆ ಪೊಲೀಸ್ ಠಾಣೆ ಮೊ.ಸಂ.05/2022 ಕಲಂ 379 ಐ.ಪಿ.ಸಿ ರೀತ್ಯಾ ದಿನಾಂಕ:28.02.2022 ರಂದು ಪ್ರಕರಣ ದಾಖಲಾಗಿದ್ದು

ಈ ಪ್ರಕರಣವನ್ನು ಪತ್ತೆ ಮಾಡಲು ಶ್ರೀಮತಿ. ಸಿರಿಗೌರಿ. ಡಿ.ಆರ್. ಐ.ಪಿ.ಎಸ್, ಪೊಲೀಸ್ ಅಧೀಕ್ಷಕರು ರೈಲ್ವೆಸ್, ಬೆಂಗಳೂರು ಹಾಗೂ ಶ್ರೀಮತಿ ಎನ್. ಪುಷ್ಪಲತಾ ಡಿ.ಎಸ್.ಪಿ ರೈಲ್ವೆ ಹುಬ್ಬಳ್ಳಿ ಉಪ ವಿಭಾಗ ರವರ ಮಾರ್ಗದರ್ಶನದಲ್ಲಿ ಶ್ರೀ ಡಿ. ಬಿ. ಪಾಟೀಲ್ ಸಿ.ಪಿ.ಐ ರೈಲ್ವೆ ಪೊಲೀಸ್ ವೃತ್ತ, ಮತ್ತು ಶ್ರೀ. ಎಸ್.ವೈ ಮರಡಿ. ಪಿ.ಎಸ್.ಐ ರವರ ನೇತೃತ್ವದಲ್ಲಿ ಆರ್. ಆರ್. ರಜಪೂರ, ಹೆಚ್‌ಸಿ–238, ಶಿವರಡ್ಡಿ ಮೊರಬ ಆರ್‌ಹೆಚ್‌ಸಿ–198, ಕೆ. ಹೆಚ್. ಲಮಾಣಿ ಆರ್.ಪಿ.ಸಿ–118, ಮಂಜಪ್ಪ ಹೊಸಕೇರಿ. ಆರ್.ಪಿ.ಸಿ–144, ಶಿವಾನಂದಸ್ವಾಮಿ ಹಿರೇಮಠ, ಆರ್.ಪಿ.ಸಿ–456 ಮತ್ತು ಪರಶುರಾಮ, ಕೆ ಆರ್.ಪಿ.ಸಿ –488, ರವರುಗಳೊಂದಿಗೆ ಕಾರ್ಯಾಚರಣೆ ನಡೆಸಿ ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಒಬ್ಬ ಸುಮಾರು 21 ವರ್ಷ, ವಯಸ್ಸಿನ ಆಸಾಮಿ ವೃತ್ತಿ– ಕೂಲಿ ಕೆಲಸ, ರೋಣ (ತಾ), ಗದಗ (ಜಿಲ್ಲೆ) ಮೂಲದವನ್ನು ಪತ್ತೆ ಮಾಡಿ ಆತನಿಂದ ಈ ಪ್ರಕರಣದಲ್ಲಿ ಕಳುವಾಗಿದ್ದ ಒಂದು ಹಿರೋ ಸ್ಪ್ಲೇಂಡರ್ ಪ್ಲಸ್ ಬೈಕ್ ಅಲ್ಲದೆ ಬೇರೆ ಬೇರೆ ಕಡೆಗಳಲ್ಲಿ ಕಳುವು ಮಾಡಿದ್ದ ವಿವಿಧ ಕಂಪನಿಯ ಒಟ್ಟು 9,35,000/– ಬೆಲೆಬಾಳುವ 18 ಬೈಕ್‌ಗಳನ್ನು ಜಪ್ತ ಪಡಿಸಿಕೊಳ್ಳುವಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯವರು ಯಶಸ್ವಿಯಾಗಿರುತ್ತಾರೆ. ಈ ತಂಡವು ನಡೆಸಿದ ತನಿಖಾ ಕಾರ್ಯಾಚರಣೆಯನ್ನು ಮೇಲಾಧಿಕಾರಿಗಳು ಶ್ಲಾಘಿಸಿರುತ್ತಾರೆ.

